

# ಟೀವಿಗೆ ಬಂದ ಕರೀನಾ

ಬಾಲಿವುಡ್‌ನ ಬಹುದೊಡ್ಡ ತಾರೆಯರೆಲ್ಲ ಟೀವಿಯಲ್ಲಿ ಮುಖ ತೋರಿಸಿಯಾಗಿದೆ. ಈಗ ಕರೀನಾ ಕಪೂರ್ ಸರದಿ. ಸಿನಿಮಾಗಳಲ್ಲಿ ಸೂಪರ್‌ತಾರೆಯಾಗಿ ಗೆದ್ದ ಬಳಿಕ ಸಾಂಸಾರಿಕ ಜೀವನವನ್ನೂ ಸುಖವಾಗಿ ನಿಭಾಯಿಸಿದ ಕರೀನಾ, ಈಗ ಟೀವಿಯ ರಿಯಾಲಿಟಿ ಶೋ ಒಂದರಲ್ಲಿ ಜಡ್ಜ್ ಆಗಿ ಭಾಗವಹಿಸಿದ್ದಾಳೆ. 'ಡಾನ್ಸ್ ಇಂಡಿಯಾ ಡಾನ್ಸ್' ರಿಯಾಲಿಟಿ ಶೋನ 7ನೇ ಸಂಚಿಕೆ ಸಿದ್ಧವಾಗುತ್ತಿದ್ದು ಕರೀನಾ ಅದರಲ್ಲಿ ಮೂವರಲ್ಲಿ ಒಬ್ಬ ಜಡ್ಜ್. ಇದಕ್ಕಾಗಿ ಟೀವಿ ಇತಿಹಾಸದಲ್ಲೇ ಅತ್ಯಧಿಕ ಸಂಭಾವನೆಯನ್ನೂ ಆಕೆ ಪಡೆದಿದ್ದಾಳೆ ಎನ್ನುವ ಸುದ್ದಿ ಹಬ್ಬಿದೆ. ಭಾರೀ ಸಂಭಾವನೆಯ ಬಗ್ಗೆ ಪತ್ರಕರ್ತರು ಕೇಳಿದಾಗ, 'ಅದರಲ್ಲೇನಿದೆ? ನನಗೆ ಎಷ್ಟು ಸಿಗಬೇಕೋ ಅಷ್ಟು ಸಿಗುತ್ತದೆ' ಎಂದಿದ್ದಾಳಂತೆ. ಆದರೆ ಟೀವಿಯ ಶೂಟಿಂಗ್ ತಂಡಕ್ಕೆ ಕರೀನಾ ಷರತ್ತೊಂದನ್ನೂ ಹಾಕಿರುವುದು ಕುತೂಹಲಕರ. 'ದಿನಕ್ಕೆ 8ರಿಂದ 12 ಗಂಟೆವರೆಗೆ ಮಾತ್ರ ಶೂಟಿಂಗ್‌ಗೆ ನಾನು ರೆಡಿ. ಅದಕ್ಕಿಂತ ಹೆಚ್ಚು ಹೊತ್ತು ಸೆಟ್‌ನಲ್ಲಿ ಇರಲಾಗದು. ಮಗ ತೈಮೂರ್ ಮನೆಯಲ್ಲಿ ಕಾಯುತ್ತಾನಲ್ಲ..' ಎಂದಿದ್ದಾಳಂತೆ ಕರೀನಾ.

ಸಿನಿಮಾಗಳಲ್ಲಿ ಬ್ಯುಸಿ ಆಗಿರುವ ಮಧ್ಯೆಯೇ ಕರೀನಾ ಟೀವಿ ಶೋನಲ್ಲಿ ಕಾಣಿಸಿಕೊಂಡಿರುವುದು ಕೆಲವರಿಗೆ ಅಚ್ಚರಿ ಮೂಡಿಸಿದೆ. ಅಕ್ಷಯ್ ಕುಮಾರ್ ಜೊತೆಗೆ ನಟಿಸಿರುವ 'ಗುಡ್ ನ್ಯೂಸ್', ಇರ್ಫಾನ್ ಖಾನ್ ಜೊತೆಗೆ ನಟಿಸುತ್ತಿರುವ 'ಅಂಗ್ರೇಜಿ ಮೀಡಿಯಂ' ಕರೀನಾಳ ಎರಡು ಹೊಸ ಚಿತ್ರಗಳು. ■

# ಅಕ್ಷಯ್ ಹಿಂಜರಿಕೆ



ಆಗಸ್ಟ್ 15 ಬಾಲಿವುಡ್‌ನ ಹಲವು ನಿರ್ಮಾಪಕರಿಗೂ ಸುದಿನವೇ. ಈ ಸಲ ಬಾಲಿವುಡ್‌ನಲ್ಲಿ ಮೂರು ಪ್ರಮುಖ ಹೀರೊಗಳ ಮೂರು ಸಿನಿಮಾಗಳು ಆಗಸ್ಟ್ 15ರಂದು ಬಿಡುಗಡೆ ಆಗುವುದಾಗಿ ಘೋಷಿಸಲಾಗಿದೆ. ಅಕ್ಷಯ ಕುಮಾರ್ ಅಭಿನಯಿಸಿರುವ 'ಮಿಶನ್ ಮಂಗಲ್', ಜಾನ್ ಅಬ್ರಹಾಂ ನಾಯಕನಾಗಿರುವ 'ಬಾಟ್ಲಾ ಹೌಸ್' ಮತ್ತು ಬಾಹುಬಲಿ ಖ್ಯಾತಿಯ ಪ್ರಭಾಸ್ ಅಭಿನಯದ 'ಸಾಹೋ' ಮೂರೂ ಚಿತ್ರಗಳು ಒಂದೇ ದಿನ ಬಿಡುಗಡೆಯಾಗುವುದು ಭಾರೀ ಪೈಪೋಟಿಗೆ ಕಾರಣವಾಗಿದೆ.

ಮೂರೂ ಚಿತ್ರಗಳ ಸಂಘರ್ಷದಿಂದ ತಮ್ಮ ಚಿತ್ರಕ್ಕೆ ಹಾನಿ ಆಗಬಹುದು ಎಂದು ನಿರೀಕ್ಷಿಸಿರುವ 'ಮಿಶನ್ ಮಂಗಲ್' ನಿರ್ಮಾಪಕರು ಈಗ ಸಿನಿಮಾದ ಬಿಡುಗಡೆಯನ್ನು ಒಂದು ವಾರ ಹಿಂದೂಡಲು ನಿರ್ಧರಿಸಿದ್ದಾರಂತೆ. ಆಗಸ್ಟ್ 9ಕ್ಕೇ ಮಿಶನ್ ಮಂಗಲ್ ಬಿಡುಗಡೆಯಾಗುವ ನಿರೀಕ್ಷೆಯಿದೆ. ಅಕ್ಷಯ್ ಕುಮಾರ್‌ನಂತಹ ಯಶಸ್ವೀ ಹೀರೊ, ವಿದ್ಯಾ ಬಾಲನ್, ತಾಪ್ಸೀ ಪನ್ನು, ನಿತ್ಯಾ ಮೆನನ್‌ರಂತಹ ಅಭಿನೇತ್ರಿಯರು ಮತ್ತು ಸೋನಾಕ್ಷಿ ಸಿನ್ಹಾಳಂತಹ ಗ್ಲಾಮರ್ ಗೊಂಬೆ ಇದ್ದೂ ಈ ಚಿತ್ರದ ಬಿಡುಗಡೆ ದಿನಾಂಕ ಬದಲಿಸಿದ್ದೇಕೆ ಎನ್ನುವುದು ಬಾಲಿವುಡ್ ಪಂಡಿತರ ಪ್ರಶ್ನೆ. ವಾಸ್ತವವಾಗಿ ಈ ಚಿತ್ರದಲ್ಲಿ ಅಕ್ಷಯ್ ಪೂರ್ಣಪ್ರಮಾಣದ ನಾಯಕನಲ್ಲ, ಕೊನೆಯ 30 ನಿಮಿಷಗಳಷ್ಟೇ ಆತನ ಪಾತ್ರ ಇದೆಯಂತೆ. ಹಾಗೆಂದೇ ನಿರ್ಮಾಪಕರು ಬಿಡುಗಡೆಯನ್ನು ಹಿಂದೂಡಿ ಸುರಕ್ಷಾ ಕ್ರಮಗಳನ್ನು ಕೈಗೊಂಡಿದ್ದಾರೆ ಎನ್ನಲಾಗುತ್ತಿದೆ.

11 ವರ್ಷಗಳ ಹಿಂದೆ ನಡೆದ 'ಬಾಟ್ಲಾ ಹೌಸ್ ಎನ್‌ಕೌಂಟರ್' ಈಗಲೂ ಸುದ್ದಿಯಲ್ಲಿರುವ ಘಟನೆ. ಈ ವಿವಾದಾತ್ಮಕ ಎನ್‌ಕೌಂಟರ್‌ನ ವಿವರಗಳನ್ನೇ ನಂಬಿಕೊಂಡು ಸೂಪರ್‌ಕಾಪ್ ಆಗಿರುವ ಜಾನ್ ಅಬ್ರಹಾಂ 'ಬಾಟ್ಲಾ ಹೌಸ್' ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾನೆ. ಪ್ರಭಾಸ್ ಮತ್ತು ಶ್ರದ್ಧಾ ಕಪೂರ್ ಅಭಿನಯದ ತ್ರಿಭಾಷಾ ಚಿತ್ರ 'ಸಾಹೊ' ಒಂದು ವರ್ಷದಿಂದಲೂ ಸುದ್ದಿ ಮಾಡುತ್ತಿದೆ. ಈ ಚಿತ್ರದ ಸಂಗೀತ ನಿರ್ದೇಶಕರಾದ ಶಂಕರ್–ಎಹ್ಸಾನ್–ಲಾಯ್ ಚಿತ್ರದಿಂದ ಹೊರನಡೆದಿದ್ದಾರೆ ಎನ್ನುವ ಸುದ್ದಿಯೂ ಬಂದಿದೆ. ಚಿತ್ರದಲ್ಲಿ ಈ ಸಂಗೀತ ನಿರ್ದೇಶಕರ ಹಾಡುಗಳನ್ನು ಉಳಿಸಿಕೊಂಡು ಹಿನ್ನೆಲೆ ಸಂಗೀತ ಬೇರೆಯವರಿಂದ ಕೊಡಿಸಲಾಗುತ್ತಿದೆಯಂತೆ. 'ಬಾಹುಬಲಿ'ಯ ಭಾರೀ ಯಶಸ್ಸಿನ ಬಳಿಕ ಪ್ರಭಾಸ್‌ನನ್ನು ತೆರೆಯ ಮೇಲೆ ನೋಡಲು ಅಭಿಮಾನಿಗಳು ಕಾತುರರಾಗಿದ್ದಾರೆ ಎನ್ನುವುದಂತೂ ನಿಜ.

■ ಬಿಂದು